**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲುಃ- ವಾದಿ ಪರ ಶ್ರೀ ಬಿ.ಕೆ.ಆರ್ ವಕೀಲರಿಂದಃ**

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನ್ನ ಗಂಡ ಚನ್ನಕೇಶವ (3 ನೇ ಪ್ರತಿವಾದಿ) ಗಾರೆ ಕೆಲಸ ಮಾಡುತ್ತಾರೆ. ಈ ದಿನ ಅವರು ಗಾರೆ ಕೆಲಸ ಮಾಡಲು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಅವರ ಆರೋಗ್ಯ ಸರಿ ಇರುವುದಿಲ್ಲ. ಅವರ ಆರೋಗ್ಯದ ದಾಖಲಾತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಾನು ಯಾವುದೇ ಚಿಕಿತ್ಸೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಈಗಲೂ 3 ನೇ ಪ್ರತಿವಾದಿ ಆರೋಗ್ಯವಾಗಿ ಚೆನ್ನಾಗಿ ಇರುತ್ತಾರೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಗೆ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಗೆ ಕಿವಿ ಕೇಳಿಸುವುದಿಲ್ಲ ಎಂದು ನಾನು ವೈದ್ಯರಿಂದ ದಾಖಲಾತಿ ಪಡೆದಿರುತ್ತೇನೆ. ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ.

2. 33 ವರ್ಷಗಳ ಹಿಂದೆ ನನ್ನ ಮದುವೆ 3 ನೇ ಪ್ರತಿವಾದಿಯವರೊಂದಿಗೆ ಆಗಿರುತ್ತದೆ. ನನ್ನ ಸ್ವಂತ ಊರು ಗೋಣೂರು. 3 ನೇ ಪ್ರತಿವಾದಿ ಮದುವೆಗಿಂತ ಮೊದಲು ನನ್ನ ಸಂಬಂದಿಕರಾಗಿರುವುದಿಲ್ಲ. 3 ನೇ ಪ್ರತಿವಾದಿಯವರ ಮನೆತನದ ಮದುವೆಗಿಂತ ಮೊದಲಿನ ವಿಷಯಗಳ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿ. 1 ರಿಂದ 3 ನೇ ಪ್ರತಿವಾದಿಯವರ ತಂದೆ ಚಿದಾನಂದಪ್ಪರವರು ಗೋಣೂರು ವಾಸಿ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಚಿದಾನಂದಪ್ಪನ ಹೆಂಡತಿ ಎಂದರೆ ಸರಿ. 1 ರಿಂದ 3 ನೇ ವಾದಿ ಹಾಗೂ 4 ನೇ ವಾದಿಯ ಗಂಡ ಮತ್ತು 2 ನೇ ಪ್ರತಿವಾದಿ ಚಿದಾನಂದಪ್ಪ ಹಾಗೂ 1 ನೇ ಪ್ರತಿವಾದಿಯ ಮಕ್ಕಳು ಎಂದರೆ ಸರಿ.

3. ದಾವಾ ಸ್ವತ್ತಿನ ಬಗ್ಗೆ ನನಗೆ ಮಾಹಿತಿ ಇರುತ್ತದೆ. ದಾವಾ ಸ್ವತ್ತು ಪೂರ್ವ ಪಶ್ಚಿಮ 30 ಅಡಿ ಉತ್ತರ ದಕ್ಷಿಣ 40 ಅಡಿ ಇದೆ ಎಂದರೆ ಗೊತ್ತಿಲ್ಲ. ದಾವಾ ಸ್ವತ್ತಿನ ಪೂರ್ವಕ್ಕೆ ರಸ್ತೆ ಇದೆ ಎಂದರೆ ಸರಿ. ದಾವಾ ಸ್ವತ್ತಿನ ಪಶ್ಚಿಮಕ್ಕೆ ಜಮೀನು ಇದೆ ಎಂದರೆ ಸರಿಯಲ್ಲ. ಮನೆಗಳು ಇರುತ್ತವೆ. ಯಾರ ಮನೆಗಳು ಇರುತ್ತವೆ ಎಂದು ಗೊತ್ತಿಲ್ಲ. ಉತ್ತರಕ್ಕೆ ಸೈಟ್ ನಂ. 11 ಇದೆ ಎಂದರೆ ಸರಿಯಲ್ಲ. ಮನೆಗಳು ಇರುತ್ತವೆ. ದಕ್ಷಿಣಕ್ಕೆ ಸೈಟ್ ನಂ. 13 ಇರುತ್ತದೆ ಎಂದರೆ ಸರಿಯಲ್ಲ. ಮನೆಗಳು ಇರುತ್ತವೆ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಚಿದಾನಂದಪ್ಪ ರವರಿಗೆ ಹಕ್ಕುಪತ್ರ ನೀಡಲಾಗಿದೆ ಎಂದರೆ ಸರಿಯಲ್ಲ. ತಹಶೀಲ್ದಾರ್ ರವರು ದಿಃ 26.02.1992 ರಂದು ನಿಪಿ 1 ರಂತೆ ಚಿದಾನಂದಪ್ಪ ರವರಿಗೆ ಆಶ್ರಯ ಯೋಜನೆ ಅಡಿಯಲ್ಲಿ

ಹಕ್ಕುಪತ್ರ ನೀಡಿರುತ್ತಾರೆ ಎಂದರೆ ಸರಿಯಲ್ಲ. ಅದರಂತೆ ಅವರ ಹೆಸರಿನಲ್ಲಿ ಖಾತೆ ಬದಲಾವಣೆಯಾಗಿರುತ್ತದೆ ಎಂದರೆ ಸರಿಯಲ್ಲ. ಚಿದಾನಂದಪ್ಪ ಈಗ ತೀರಿಕೊಂಡಿರುತ್ತಾರೆ. ಚಿದಾನಂದಪ್ಪ ತೀರಿಕೊಂಡ ಮೇಲೆ ಅವರ ಮಕ್ಕಳಿಗೆ ಗೊತ್ತಿಲ್ಲದಂತೆ 1 ನೇ ಪ್ರತಿವಾದಿ ತಮ್ಮ ಹೆಸರಿಗೆ ದಾವಾ ಸ್ವತ್ತಿನ ಖಾತೆ ಬದಲಾವಣೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಮಂಜೂರು ಆದಾಗಿನಿಂದ ಚಿದಾನಂದಪ್ಪ ಹಾಗೂ ಅವರ ಮಕ್ಕಳು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

4. 3 ನೇ ಪ್ರತಿವಾದಿ ಸಲ್ಲಿಸಿದ ತಕರಾರಿನ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಾನು ಈಗ ನನ್ನ ತಾಯಿ ಮನೆಯಲ್ಲಿ ವಾಸಿಸುತ್ತೇನೆ. ಸುಮಾರು 9-10 ವರ್ಷಗಳಿಂದ ನಾನು ನನ್ನ ತಾಯಿ ಮನೆಯಲ್ಲಿ ವಾಸಿಸುತ್ತಿದ್ದೇನೆ. ದಿಃ 24.01.1992 ರಂದು 3 ನೇ ಪ್ರತಿವಾದಿಯವರಿಗೆ ಮಂಜೂರಾದ ಹಕ್ಕು ಪತ್ರ ದಾಖಲೆ ಇರುತ್ತದೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಹಕ್ಕು ಪತ್ರದಲ್ಲಿ ಬರೆದಿರುವ ಚಕ್ಕುಬಂದಿ ಹೇಳಲು ಬರುವುದಿಲ್ಲ. ನಮ್ಮ ಸೈಟಿನ ಪೂರ್ವಕ್ಕೆ ಯಶೋದಮ್ಮ , ಪಶ್ಚಿಮಕ್ಕೆ ಪಂಕಜಮ್ಮ, ಉತ್ತರ ದಕ್ಷಿಣಕ್ಕೆ ರಸ್ತೆಗಳು ಇರುತ್ತವೆ. ಈ ಚಕ್ಕುಬಂದಿಯಂತೆ ನಮಗೆ ಹಕ್ಕುಪತ್ರ ನೀಡಿರುವ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಈ ಚಕ್ಕುಬಂದಿಯಂತೆ ನಮ್ಮ ಹೆಸರಿನಲ್ಲಿ ಹಕ್ಕುಪತ್ರ ನೀಡಲಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವ ದಿನಾಂಕದಂದು ಹಕ್ಕುಪತ್ರ ನೀಡಲಾಗಿದೆ ಎಂದು ನೆನಪಿಲ್ಲ. ಯಾವ ಸರ್ವೇ ನಂಬರ್ ನಲ್ಲಿ ಸದರಿ ಸೈಟ್ ಮಾಡಲಾಗಿದೆ ಎಂದು ನೆನಪಿಲ್ಲ. ನಮ್ಮ ಹೆಸರಿನಲ್ಲಿ ಸದರಿ ಸೈಟ್ ನ ಖಾತೆ ಬದಲಾವಣೆಯಾಗಿರುವುದಿಲ್ಲ. ಖಾತೆ ಬದಲಾವಣೆಗೆ ನಾವು 1992 ರಲ್ಲಿ ಅರ್ಜಿ ನೀಡಿರುತ್ತೇವೆ. ಸದರಿ ಅರ್ಜಿಯ ನಕಲು ಇರುತ್ತದೆ. ಯಾವ ಕಾರಣಕ್ಕಾಗಿ ಖಾತೆ ಬದಲಾವಣೆ ಮಾಡಿರುವುದಿಲ್ಲ ಎಂದು ಗೊತ್ತಿಲ್ಲ. ಪಂಚಾಯಿತಿಯವರು ಆಮೇಲೆ ಹಕ್ಕುಪತ್ರದಂತೆ ಖಾತೆ ಬದಲಾವಣೆ ಮಾಡಲು ಹೇಳಿದ್ದರು ಆದ್ದರಿಂದ ಯಾವುದೇ ಕ್ರಮ ಕೈಗೊಂಡಿಲ್ಲ. ಅರ್ಜಿ ನೀಡಿದ 2-3 ವರ್ಷದ ನಂತರ ಖಾತೆ ಬದಲಾವಣೆ ಬಗ್ಗೆ ವಿಚಾರಿಸಲು ಹೋಗಿದ್ದೆವು. ಅರ್ಜಿ ನೀಡಿ 2-3 ವರ್ಷದ ಮಧ್ಯ ಅರ್ಜಿಯ ಬಗ್ಗೆ ವಿಚಾರಣೆ ಮಾಡಲು ಹಾಗೂ ಖಾತೆ ಬದಲಾವಣೆಯ ಬಗ್ಗೆ ವಿಚಾರಿಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ.

5. 30 ವರ್ಷಗಳ ಹಿಂದೆ ಪಂಚಾಯಿತಿಗೆ ಖಾತೆ ಬದಲಾವಣೆಗೆ ಅರ್ಜಿ ನೀಡಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮಗೆ ಸೈಟ್ ನಂ. 10 ಅಥವಾ ಯಾವುದೇ ಸೈಟ್ ಮಂಜೂರು ಆಗದೇ ಇರುವುದರಿಂದ ನಮ್ಮ ಹೆಸರಿಗೆ ಖಾತೆ ಬದಲಾವಣೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಮಗೆ ಮಂಜೂರಾದ ನಿವೇಶನದಲ್ಲಿ ಗುಡಿಸಲು ಕಟ್ಟಿ ವಾಸವಿದ್ದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಈ ಬಗ್ಗೆ ನಾನು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಪ್ರಕೃತಿ ವಿಕೋಪದಿಂದ ಗುಡಿಸಲು ಬಿದ್ದು ಹೋಗಿರುತ್ತದೆ. ಪ್ರಕೃತಿ ವಿಕೋಪದಿಂದ ಗುಡಿಸಲು ಬಿದ್ದಾಗ ತಹಶೀಲ್ದಾರ್ ವರದಿ ಮಾಡುತ್ತಾರೆ ಎಂದರೆ ಸರಿ. ನಮ್ಮ ಗುಡಿಸಲು ಬಿದ್ದಾಗ ತಹಶೀಲ್ದಾರ್ ವರದಿ ಮಾಡಿರುತ್ತಾರೆ. ನಮಗೆ ಆಗ ಪರಿಹಾರ ಹಣ ನೀಡಿರುತ್ತಾರೆ. ಎಷ್ಟು ಹಣ ನೀಡಿದ್ದರು ಎಂದು ನೆನಪಿಲ್ಲ. ಈ ಕುರಿತು ತಹಶೀಲ್ದಾರ್ ಕಛೇರಿಯಲ್ಲಿ ದಾಖಲಾತಿ ಸಿಗುತ್ತವೆ ಎಂದರೆ ಸರಿ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ.

6. ಪ್ರಕೃತಿ ವಿಕೋಪದಿಂದ ನಾವು ವಾಸವಿದ್ದ ಗುಡಿಸಲು ಬಿದ್ದು ಹೋಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾನು ಯಾವುದೇ ಗುಡಿಸಲು ಕಟ್ಟಿರುವುದಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮದುವೆಯಾದಾಗಿನಿಂದ ನಾನು ನನ್ನ ತಾಯಿ ಮನೆಯಲ್ಲಿ ವಾಸಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚಾಯಿತಿಯಲ್ಲಿ ನನ್ನ ಹೆಸರಿನಲ್ಲಿ ಒಂದು ಮನೆ ಇದೆ ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿ ಖಾತೆ ನಂ. 326, ಆಸ್ತಿ ನಂ. 276/ಎ ಮನೆ ಇದೆ ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿ ಈ ಮೇಲೆ ಹೇಳಿದ ಮನೆ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿ ಯಾವುದೇ ಮನೆ ಇರುವುದಿಲ್ಲ ಎಂದು ಪಂಚಾಯಿತಿ ಅಧಿಕಾರಿಗಳಿಂದ ಸಾಕ್ಷಿ ಹೇಳಿಸಲು ತೊಂದರೆ ಇಲ್ಲ. ಗೋಣೂರಿನಲ್ಲಿ ನನ್ನ ಹೆಸರಿನಲ್ಲಿ ಆರ್.ಸಿ.ಸಿ ಮನೆ ಕಟ್ಟಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. ನಾನು, 1 ಮತ್ತು 2 ನೇ ಪ್ರತಿವಾದಿಯೊಂದಿಗೆ ಒಳ್ಳೆ ಸಂಬಂಧ ಹೊಂದಿರುತ್ತೇನೆ. ನಾನು ಹಾಗೂ 1 ಮತ್ತು 2 ನೇ ಪ್ರತಿವಾದಿ ಶಾಮೀಲಾಗಿ ವಾದಿಗಳಿಗೆ ದಾವಾ ಸ್ವತ್ತನ್ನು ಕೊಡಬಾರದು ಎಂದು 1 ನೇ ಪ್ರತಿವಾದಿ ಹೆಸರಿನಲ್ಲಿ ಖಾತೆ ಬದಲಾವಣೆ ಮಾಡಿಸಿರುತ್ತೇವೆ

ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಸ್ವಚ್ಛ ಮಾಡುವಾಗ ವಾದಿಗಳು ತಡೆದಿರುತ್ತಾರೆ ಎಂದರೆ ಸರಿ. ಅವರು ಗಲಾಟೆ ಮಾಡಿರುತ್ತಾರೆ. ಆಗ ಊರಿನಲ್ಲಿ ಪಂಚಾಯಿತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆಗ ವಾದಿಗಳು ದಾವಾ ಸ್ವತ್ತು ಅವರ ತಂದೆ ಸ್ವತ್ತಾಗಿದ್ದಾರಿಂದ ಭಾಗ ಕೇಳಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು 1 ನೇ ಪ್ರತಿವಾದಿಯವರ ಗಂಡನ ಸ್ವತ್ತು ಆದುದರಿಂದ ಸದರಿ ಸ್ವತ್ತು ಆಕೆಗೆ ಸೇರಿರುತ್ತದೆ ಎಂದು ನಾವು ಆಕೆಯಿಂದ ಹೇಳಿಸಿರುತ್ತೇವೆ ಎಂದರೆ ಸರಿಯಲ್ಲ. ಈ ಕುರಿತು ಊರಿನಲ್ಲಿ ಪಂಚಾಯಿತಿ ಆಗಿರುತ್ತದೆ ಎಂದರೆ ಸರಿಯಲ್ಲ. ವಾದಿಯವರ ತಂದೆಯ ಹೆಸರಿನಲ್ಲಿ ಹಕ್ಕು ಪತ್ರ ಇರುವುದರಿಂದ ಅವರಿಗೆ ಭಾಗ ಬರುತ್ತದೆ ಎಂದು ಪಂಚಾಯಿತಿದಾರರು ಹೇಳಿದ್ದರು ಎಂದರೆ ಸರಿಯಲ್ಲ. ವಾದಿಗಳಿಗೆ ದಾವಾ ಸ್ವತ್ತಿನಲ್ಲಿ ಸಮಾನವಾದ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸೈಟ್ ನಂಬರ್ ಹೇಳಲು ಬರುವುದಿಲ್ಲ. ವಾದಿಗಳ ಸ್ವತ್ತಿಗೆ ಹಾಗೂ ನನಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ವಾದಿಗಳು ನಮ್ಮ ಸೈಟ್ ಗೆ ಸಂಬಂಧಿಸಿ ದಾವೆ ಹೂಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆದುದರಿಂದ ನನ್ನ ತಕರಾರಿನಲ್ಲಿ ಹಾಗೂ ಸಾಕ್ಷ್ಯದಲ್ಲಿ ಚಕ್ಕುಬಂದಿ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ನಮಗೂ ಹಾಗೂ ದಾವಾ ಸ್ವತ್ತಿಗೂ ಯಾವುದೇ ಸಂಬಂಧವಿಲ್ಲ ಹಾಗೂ ಯಾವುದೇ ಹಕ್ಕುಪತ್ರವನ್ನು ನಮಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

8. ಚಿದಾನಂದಪ್ಪ ಮೂಲತಃ ಬೇಡರ ಏಡರಹಳ್ಳಿಯವರು ಎಂದು ತೋರಿಸಲು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ವಾದಿಯವರ ಕುಟುಂಬಕ್ಕೆ ಸಾಕಷ್ಟು ಆಸ್ತಿ ಹಾಗೂ ಮನೆಗಳು ಇದ್ದ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನೆ. ವಾದಿಗಳು ಉಚಿತ ನಿವೇಶನ ಪಡೆಯಲು ಅರ್ಹವಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಗೋಣೂರು ಖಾಯಂ ವಾಸಿ ಎಂದು ತೋರಿಸಲು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಮನೆ ಇಲ್ಲದೇ ಇರುವುದರಿಂದ ಖಾಲಿ ನಿವೇಶನ ನೀಡಲಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತಿಪ್ಪೆ ತೆಗೆದು ಹಾಕಲು 1 ನೇ ಪ್ರತಿವಾದಿ ಜೆ.ಸಿ.ಬಿ ತಂದಿದ್ದರು. ದಾವಾ ಸ್ವತ್ತಿಗೂ ಹಾಗೂ ನಮಗೂ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

9. ನಮ್ಮ ಹಕ್ಕುಪತ್ರ ಕಳೆದುಹೋಗಿರುವುದಿಲ್ಲ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಹಕ್ಕುಪತ್ರ ಕಳೆದುಹೋದ ಬಗ್ಗೆ ಅರ್ಜಿ ನೀಡಿರುವುದಿಲ್ಲ. ನಾನು ಹಾಜರುಪಡಿಸಿದ ಫೋಟೋಗಳು ದಾವಾ ಸ್ವತ್ತಿಗೆ ಸಂಬಂಧಿಸಿರುತ್ತವೆ ಎಂದರೆ ಸರಿಯಲ್ಲ. ಯಾವುದೇ ಇಲಾಖೆಯವರು ಹಾಗೂ ತಹಶೀಲ್ದಾರ್ ನನಗೆ ಸೈಟ್ ನಂ. 10 ನ್ನು ಮಂಜೂರು ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ಸೈಟಿಗೆ ಯಾವುದೇ ಕಂದಾಯ ಕಟ್ಟಿಲ್ಲ. ನಮ್ಮ ಗುಡಿಸಲಿನಲ್ಲಿ ವಿದ್ಯುತ್‌ಚ್ಛಕ್ತಿ ಸಂಪರ್ಕ ಪಡೆದಿದ್ದೆವು. ಈ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. 3 ನೇ ಪ್ರತಿವಾದಿಯವರ ಹೆಸರಿನಲ್ಲಿ ವಿದ್ಯುತ್‌ಚ್ಛಕ್ತಿ ಸಂಪರ್ಕ ಪಡೆದಿದ್ದೆವು. ಪಂಚಾಯಿತಿಯಿಂದ ಎನ್.ಓ.ಸಿ ಪಡೆದರೆ ಮಾತ್ರ ವಿದ್ಯುತ್‌ಚ್ಛಕ್ತಿ ಸಂಪರ್ಕ ನೀಡಲಾಗುತ್ತದೆ ಎಂದರೆ ಗೊತ್ತಿಲ್ಲ. ಪಂಚಾಯಿತಿಯಿಂದ ಈ ಬಗ್ಗೆ ದಾಖಲೆ ಪಡೆದ ಬಗ್ಗೆ ಮಾಹಿತಿ ಇಲ್ಲ. ನಾವು ಯಾವುದೇ ಗುಡಿಸಲು ಹಾಕಿರುವುದಿಲ್ಲ ಹಾಗೂ ವಿದ್ಯುತ್‌ಚ್ಛಕ್ತಿ ಸಂಪರ್ಕ ಪಡೆದಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಗುಡಿಸಲಿಗೆ 10 ನೇ ನಂಬರ್ ನೀಡಲಾಗಿತ್ತು. ಗುಡಿಸಲಿನಲ್ಲಿ ವಾಸಿಸುತ್ತಿದ್ದಾಗ ನಾವು ಓಟ್ ಹಾಕಿರುತ್ತೇವೆ. ಓಟರ್ ಲೀಸ್ಟ್ ಇರುತ್ತದೆ. ಅದನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ.

10. ದಾವಾ ಸ್ವತ್ತು ದಿಃ 26.02.1992 ರಂದು ಚಿದಾನಂದಪ್ಪರವರಿಗೆ ಮಂಜೂರು ಆಗಿರುತ್ತದೆ ಎಂದರೆ ಸರಿಯಲ್ಲ. ನಿಪಿ 1 ರಂತೆ ಅವರ ಹೆಸರಿನಲ್ಲಿ ಪಂಚಾಯಿತಿಯಲ್ಲಿ ಖಾತೆ ಆಗಿರುತ್ತದೆ ಎಂದರೆ ಸರಿಯಲ್ಲ. ಅವರು ಕಂದಾಯ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಚಿದಾನಂದಪ್ಪ ತೀರಿಕೊಂಡ ಮೇಲೆ ವಾದಿಗಳಿಗೆ ಸದರಿ ಸ್ವತ್ತಿನಲ್ಲಿ ಭಾಗ ನೀಡಬಾರದು ಎಂದು ನಾನು ಹಾಗೂ 1 ನೇ ಪ್ರತಿವಾದಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯವರಿಗೆ ಭಾಗ ನೀಡುವುದರಿಂದ ತಡೆಯಲು ನಾನು ಹಾಗೂ ಪ್ರತಿವಾದಿಗಳು ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ 3 ನೇ ಪ್ರತಿವಾದಿಗೆ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)
ಓ.ಹೇ.ಕೇ. ಸರಿ. ಇದೆ.

2 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಚಿತ್ರದುರ್ಗ